ರುಚಿಕರವಾದ ಉಪಹಾರ
ಸಿಹಿ–ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ ಫೋ : 232878

www.kundaprabha.com
e-mail : kundaprabha@gmail.com

# ಕುಂದಪ್ರಭ

ಸ್ಥಾಪನೆ : 1948
6 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್‌ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್: 230242

*ಸಂಪುಟ :25 *ಸಂಚಿಕೆ :4 * KA/SK/Udp/1263/2015-17 * R.NO. 50495/91 * ತಾರೀಕು 03–02–2015 * ರೂ 5/– * ವಾರ್ಷಿಕ ಚಂದಾ : 270/– ಅಂಚೆಯಲ್ಲಿ : 300/

## ನಾಗಾಚಲದಲ್ಲಿ ಅಷ್ಟಪವಿತ್ರ ನಾಗಮಂಡಲ ಸೇವೆ



ಕುಂಭಾಸಿ ನಾಗಾಚಲ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಮೂಲ ನಾಗಸನ್ನಿಧಿಯಲ್ಲಿ ಅರುಣ ಕಲಗುಜ್ಜಿಕರ ಹಾಗೂ ಅಮಿತಾ ಕಲಗುಜ್ಜಿಕರ ಮತ್ತು ಮಕ್ಕಳ ಸೇವಾರ್ಥವಾಗಿ ಪುರೋಹಿತ ಗೋಪಾಲ ಮಾಧವ ನಾವಡರ ನೇತೃತ್ವದಲ್ಲಿ ಮತ್ತು ಬ್ರಹ್ಮಶ್ರೀ ಗೋಪಾಲ ಸೋಮಯಾಜಿ ಅವರ ಆಚಾರ್ಯತ್ವದಲ್ಲಿ ನಾಗಪಾತ್ರಿ ವೇ.ಮೂ. ಕಕ್ಕುಂಜೆ ನಾಗಾನಂದ ವಾಸುದೇವ ಆಚಾರ್ಯ ಇವರ ನೇತೃತ್ವದಲ್ಲಿ ಮತ್ತು ಅಂಪಾರು ಸರ್ವೋತ್ತಮ ವೈದ್ಯ ಬಳಗದವರಿಂದ ಅಷ್ಟಪವಿತ್ರ ನಾಗಮಂಡಲ ಸೇವೆ ಜ.31 ರಂದು ಶಾಸ್ತ್ರೋಕ್ತವಾಗಿ ಜರುಗಿತು.

ಉಡುಪಿ ಶಿರೂರು ಮಠದ ಶ್ರೀ ಶ್ರೀ ಲಕ್ಷ್ಮೀವರತೀರ್ಥ ಶ್ರೀ ಪಾದಂಗಳವರು ದೀಪ ಪ್ರಜ್ವಲಿಸುವ ಮೂಲಕ ಅಷ್ಟ ಪವಿತ್ರ ನಾಗಮಂಡಲವನ್ನು ಶಾಸ್ತ್ರೋಕ್ತವಾಗಿ ಆಶೀರ್ವದಿಸಿದರು.

ನಾಗನ ಅಚಲವಾದ ನೆಲೆ ಈ ಭೂಮಂಡಲದಲ್ಲಿದ್ದು ಕರಾವಳಿಯಲ್ಲಿ ನಾಗನ ಮೂಲ ಸನ್ನಿಧಾನವಿದೆ, ಕೃಷಿ ಭೂಮಿಯನ್ನು ನಾಗ ಅನುಗ್ರಹ ಮಾಡಿರುವುದರಿಂದ ಉಳುವ ಭೂಮಿಯಲ್ಲಿ ಯಾವುದೇ ಸರ್ಪ ದೋಷಗಳಿರುವುದಿಲ್ಲ. ಶಾಸ್ತ್ರ ಹೇಳುವಂತೆ ಸೂರ್ಯನ ರಶ್ಮಿಯಲ್ಲಿಯೂ ಸರ್ಪನ ಸನ್ನಿಧಾನವಿದೆ. ಆ ಕಿರಣಗಳು ನಮ್ಮ ದೇಹದ ಮೇಲೆ ಬಿದ್ದಾಗ ಅನೇಕ ಕಾಯಿಲೆಗಳು ಪರಿಹಾರವಾಗುವುದು. ಈ ಹಿನ್ನೆಲೆಯಲ್ಲಿ ನಾಗನ ಆರಾಧನೆಗೆ ಮಹತ್ವ ನೀಡಲಾಗುತ್ತಿದೆ ಎಂದು ಸಂಪುಟ

(7ನೇ ಪುಟಕ್ಕೆ)

## ಕುಂದಾಪುರದಲ್ಲಿ ಆಳ್ವಾಸ್ ಸಾಂಸ್ಕೃತಿಕ ವೈಭವ



ಕುಂದಾಪುರದ ಸ.ಪ.ಪೂ.ಕಾಲೇಜು ವಠಾರದಲ್ಲಿ ಮೂಡಬಿದಿರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳಿಂದ ಅದ್ಭುತವಾದ ಸಾಂಸ್ಕೃತಿಕ ಪ್ರದರ್ಶನ ನಡೆಯಿತು. ನೃತ್ಯ, ನಾಟಕ, ಯಕ್ಷಗಾನ ವೈವಿಧ್ಯಗಳು ಪ್ರೇಕ್ಷಕರಲ್ಲಿ ರೋಮಾಂಚನ ಉಂಟು ಮಾಡಿದವು. ಕುಂದಾಪುರ ನುಡಿಸಿರಿ ಘಟಕದ ಸಹಕಾರದೊಂದಿಗೆ ನಡೆದ ಈ ಮೂರು ಘಂಟೆ ಕಾಲದ ಕಾರ್ಯಕ್ರಮ ಕುಂದಾಪುರದ ಪುರ ಪ್ರದೇಶದಲ್ಲಿ ಪ್ರಪ್ರಥಮವಾಗಿ ನಡೆಯಿತು. (ಚಿತ್ರ : ಸುಮಾ ಸ್ಟುಡಿಯೋ)

## ಸಾರ್ವಜನಿಕರ ಅವಗಾಹನೆಗೆ

ಕುಂದಾಪುರದ ನ್ಯಾಯವಾದಿ, ಎಂ. ಸದಾನಂದ ಶೆಟ್ಟಿ ತನ್ನ ಕಕ್ಷಿಗಾರರಾದ ಕುಂದಾಪುರ ತಾಲೂಕು, ಕೋಟೇಶ್ವರ ಗ್ರಾಮದ ದಿವಂಗತ ಕೆ.ವೆಂಕಟರಾವ್ ಅವರ ಮಗ ಕೆ.ವಿ.ಕೃಷ್ಣಯ್ಯ ನೀಡಿದ ಅನುಭವದಂತೆ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ : ತನ್ನ ಕಕ್ಷಿಗಾರರ ಮಿತಾಕ್ಷರ ಕುಟುಂಬದ ಸ್ಥಿರಾಸ್ತಿಗಳಾದ ಕುಂದಾಪುರ ತಾಲ್ಲೂಕು, ಕೋಟೇಶ್ವರ ಗ್ರಾಮದ ಸ.ನಂ. 209–2, 211–4, 211–5, 211–6, 215–1, 215–6, 215–8, 217–7, 218–3, 218–9, 224–9, 225–1 ಬಿ, 331–6, 351–3, 351–7ಂ, 223–7, 331–9ಎ, 213–9, 224–2, 223–4 & 221–4 ಪಿ2 ಹಾಗೂ ಕುಂದಾಪುರ ತಾಲ್ಲೂಕು, ಹಂಗಳೂರು ಗ್ರಾಮದ ಸ.ನಂ. 35–6 ಬಿ, 35–7 ಸಿ, 36–6 ಬಿ, 35–7ಎ, 34–9, 34–6 ಡಿ, & 34–4 ಬಿ, ವಗೈರೆ ಸ್ಥಳಗಳ ಬಗ್ಗೆ ಕುಂದಾಪುರದ ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಓ.ಎಸ್.ನಂ.17/2014 ರಲ್ಲಿ ಒಂದು ಹಿಸ್ಸೆ ಧಾವೆಯನ್ನು ದಾಖಲಿಸಿದ್ದು, ಆ ಧಾವೆಯ ಮಧ್ಯಾವಧಿ ಅರ್ಜಿ ಸಂಖ್ಯೆ 2 ರಲ್ಲಿ ಆದ ಆದೇಶದ ವಿರುದ್ಧ ಕುಂದಾಪುರದ ಮಾನ್ಯ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದಲ್ಲಿ ಜರುಗಿದ ಎಂ.ಎ.ನಂ 2/2014 ರಲ್ಲಿ ಮಾನ್ಯ ನ್ಯಾಯಾಲಯದವರು ದಿನಾಂಕ 24–01–2015 ರಲ್ಲಿ ಮಾಡಿದ ಆದೇಶದಂತೆ ಸದ್ರಿ ಕುಟುಂಬದ ಸದಸ್ಯರು ಧಾವಾ ಸ್ಥಳಗಳನ್ನು ಪರಭಾರೆ ಮಾಡದಂತೆ ಹಾಗೂ ಖರೀದಿದಾರರು ತಾವು ಖರೀದಿಸಿದ ಸದ್ರಿ ಮಿತಾಕ್ಷರ ಕುಟುಂಬದ ಸ್ಥಿರಾಸ್ತಿಗಳನ್ನು ಪರಭಾರೆ ಮಾಡದಂತೆ ಇಂಜಂಕ್ಷನ್ ಹುಕುಂ ನೀಡಿರುತ್ತಾರೆ. ಆದುದರಿಂದ ಯಾರೊಬ್ಬರು ಸದ್ರಿ ಮಿತಾಕ್ಷರ ಕುಟುಂಬದ ಈ ಮೇಲೆ ಹೇಳಿದ ಯಾವುದೇ ಸ್ಥಳಗಳನ್ನು ಖರೀದಿಸಬಾರದಾಗಿ ನನ್ನ ಕಕ್ಷಿಗಾರರ ಕೋರಿಕೆ. ಒಂದೊಮ್ಮೆ ಇದಕ್ಕೆ ವಿರುದ್ಧವಾಗಿ ಖರೀದಿಸಿದಲ್ಲಿ, ಮುಂದೆ ಆಗುವ ಸಕಲ ತೊಂದರೆಗಳಿಗೆ ಮಾರಾಟಗಾರರು ಹಾಗೂ ಖರೀದಿದಾರರೇ ಜವಾಬ್ದಾರರಾಗಿರುತ್ತಾರೆ ವಿನಃ ನನ್ನ ಕಕ್ಷಿಗಾರರು ಜವಾಬ್ದಾರರಲ್ಲ.

ಕುಂದಾಪುರ
30–01–2015

(ಎಂ.ಸದಾನಂದ ಶೆಟ್ಟಿ )
ನ್ಯಾಯವಾದಿ




AXIS BANK
Main Road, Near Abharana
Kundapura
Enjoy all modern Banking Facilities
at your Doorstep
For Free Personalized Service
Please Call
8095511181
08254-235601 /2 /3